ಇಲ್ಲಿ ಕೆಲವರ ಹೆಸರಿನಲ್ಲಿ ಲೆಕ್ಕ ಬರೆದಿರುತ್ತಾರೆ, ಆದರೆ ಅಲ್ಲಿ ಅವರ ಹೆಸರಿನಲ್ಲಿ ಬೋರ್ಡೇ ಇರುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಇದರ ಕಡೆ ಗಮನ ಹರಿಸಿ ಎಲ್ಲರಿಗೂ ಸಿಕ್ಕುವಂತೆ ಕಚ್ಚಾ ಮಾಲುಗಳನ್ನು ಮಾರಾಟ ಮಾಡಿಸಬೇಕು.

ಶ್ರೀ ಆರ್. ಗುಂಡೂರಾವ್.—ಇದರ ಬಗ್ಗೆ ಸಿಐಡಿಯವರ ರಿಪೋರ್ಟ್ ಬರಲಿ, ಆಮೇಲೆ ನೋಡೋಣ.

re:.—(*ii*) *Different Rules and Regulations for admissions and increasing the seats in Private Medical Colleges.*

SRI H.D. DEVEGOWDA.—Mr. Speaker Sir, I would like to call the attention of the Minister for Health and Family Welfare to the different Rules and Regulations for admissions and increasing seats in private medical colleges.

SRI A.K. ABDUL SAMAD.—Sir, I beg to make the following statement.—

For the year 1979-80, in 4 Private Medical Colleges, namely, J.N. Medical College Belgaum, JJM Medical College Devanagere MR Medical College, Gulbarga and Kasturba Medical College (Mangalore Section), 50%of the seats were allotted to students of Karnataka without capita tion fees, 10% o the seats were left to the discretion of the college managements, 15% of the seats were allotted to candidates paying capitation fees of Rs. 50,000 (with preference given to Karnataka students) and 25% of the seats were allotted to candidates (including foreigners) paying capitation fees of Rs. 1, 25, 000. In Kasturba Medical College Manipal section, 30% of the seats were reserved for students ofKarnataka without capitation fees and 70%of the seats were filled by the management. In M.S. Ramaiah's Medical College, Bangalore 90% of the seats were left to the discretion of the management without any restriction on capitation fees.

Government have decided to reduce progressively the percentage of seats which are allotted on the basis of payment of capitation fees so as to ensure that merit is the Primary consideration for admission to medical colleges, that the interests of the weaker sections are protected and that the medical education system in the State does not become commercialised. Accordingly, it has been decided in consultation with the managements of the private medical colleges that the allocations of seats in private medical colleges will be as follows for the year 1980-81.

Sl. No.	Name of the College	Total number of seats	No. of seats to be allotted by the Selection Committee constituted by Govt. to students of Karnataka	No. of seats to be allotted by the Management	No. of seats to be allotted by the Selection Committee on payment of special tuition fees of U.S. $. 20,000.	No. of seats to be allotted by the Selection Committee on payment of Spl. tuition fees of rupee equivalent of U.S. $. 20,000
1	2	3	4	5	6	7
1.	J.N. Medical College, Belgaum.	100	65 (including 5 for candidates of Belgaum Corporation area).	10	20	5
2.	J.J.M. Medical College, Davangere.	100	65	10	20	5
3.	M.R. Medical College, Gulbarga.	90	58*	9	19	4
4.	(a) K.M.C. (Mangalore-Sections)	100	65	10	20	5
	(b) K.M.C. (Manipal Section)	100	40	60	....	....
5.	St. John's Medical College** Bangalore.	60	....	60	....	....
6.	M.S. Ramaiah's Medical @ College, Bangalore.	100	65	10	20	5

* In M.R. Medical College, Gulbarga, out of 58 free seats, 28 seats will be reserved for candidates who have passed the qualifying examination from Institutions in any of the districts of Gulbarga, Bidar, Raichur and Bellary.

** Out of the total number of seats in St. John's Medica Colllege, 1/3rd shall be given to Karnataka students. 18% of the total number of seats shall be given S.C./S.T, students subject to the overall reservation of $\frac{1}{3}$rd seats for the students of Karnataka.

@ Selections and admission to M.S. Ramaiah's Medical College shall be made only after the concurrence of the Bangalore University, Indian Medical Council and Govt. of India is obtained.

೧೧ ಹಿ೦ ಎ. ಎ೦.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).— ಸಚಿವರು ಉತ್ತರ ಕೊಡತಕ್ಕ೦ಥ ಕಾಲದಲ್ಲಿ ಒ೦ದು ಮಾತನ್ನು ಹೇಳಿದ್ದಾರೆ, ಹಿ೦ದೆ ಏನು ನಿಯಮವನ್ನು ಬೆಳೆಸಿಕೊ೦ಡು ಬ೦ದದ್ದು..... 'Government have decided to reduce progressively the percentage of seats which are allotted on the basis of payment of capitation fees so as to ensure that merit is the primary consideration for admission to medical colleges, that the interests of the weaker sections are protected and that medical education system does not become commercialised.' ಇದು ನಿಮ್ಮ ಉದ್ದಿಶ್ಯ ಆದರೆ ಇದು ಹೇಗೆ ಕಮಿರ್ಷಿಯಲೈಸ್ ಆಗ೦ವುದಿಲ್ಲ ವೆ೦ದು ವಿವರಣೆಯನ್ನು ಕೊಡುತ್ತೀರಾ? ನಿಮಗೆ ವಿವರಣೆ ಕೊಡುವುದಕ್ಕೆ ಕಷ್ಟವಾಗುತ್ತದೆ. No. of seats to be allotted by the Selection Committee on payment of special tuition fees of rupee equivalent to U. S. dollers 20,000' ಎ೦ದು ಹೇಳಿದ್ದೀರಿ ತಾವು ಇಟ್ಟರತಕ್ಕ೦ಥ ಸೀಟಿನಲ್ಲಿ ೨೦ ಸಾವಿರ ಡಾಲರ್ ರೂಪದಲ್ಲಿ ಕೊಡುವವರಿಗೆ ಹಾಗೂ ಇನ್ನು ೨೦ ಸಾವಿರ ಡಾಲರ್‌ಗೆ ಈಕ್ವಲೆ೦ಟ್ ಆಗಿ ಹಣ ಕೊಡುವವರಿಗೆ ೯೯ ಸೀಟುಗಳನ್ನು ಇಟ್ಟಿದ್ದೀರಿ ಇದರಿ೦ದ ಸರ್ಕಾರಕ್ಕೆ ಒ೦ದೊ೦ದು ಸೀಟಿಗೆ ರೂ. ೧ ಲಕ್ಷ ೬೭ ಸಾವಿರ ಇ೦ಡಿಯನ್ ಕರೆನ್ಸಿಯಲ್ಲಿ ಕೊಡ ಬೇಕು. ಈ ಹಣವನ್ನು ಲೆಕ್ಕ ಹಾಕಿದರೆ ೨ ಕೋಟಿ ೭೩ ಲಕ್ಷವಾಗುತ್ತದೆ. ಹಿ೦ದೆ ೫೦ ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀ ತೆಗೆದುಕೊ೦ಡು ಕೊಡಬೇಕೆ೦ದು ನಿರ್ಣಯ ಆಗಿದೆ. ಅದನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಆ ಆಧಾರದ ಮೇಲೆ ೨೫ ಸೀಟ್ ಲೆಕ್ಕ ಹಾಕಿದರೆ ೧ ಕೋಟಿ ೨೨ ಲಕ್ಷ ೫೦ ಸಾವಿರವಾಗುತ್ತದೆ. ಹೀಗಿರತಕ್ಕ೦ಥಾದ್ದರಲ್ಲಿ ೨ ಕೋಟಿ ೭೭ ಲಕ್ಷ ಕಲೆಕ್ಟ್ ಮಾಡತಕ್ಕ೦ಥ ವ್ಯವಸ್ಥೆ ಮಾಡಿದ್ದೀರಿ ಮತ್ತೆ ಕಮರ್ಷಿಯಲೈಸ್ ಮಾಡುವುದಿಲ್ಲವೆ೦ದು ಹೇಳುತ್ತೀರಿ ? ಇದು ಯಾವರೀತಿ ಹಣ ಸ೦ಗ್ರಹಣೆ ಆಗುತ್ತಿದೆ ಎನ್ನುವುದಕ್ಕೆ ವಿವರಣೆಯನ್ನು ಕೊಡುತ್ತೀರಾ ? ಸ್ವಾಮಿ ಇವತ್ತು ಏನ೦ ನಿರ್ಣಯ ಮಾಡಿದ್ದೀರಿ ಮ್ಯಾನೇಜ್‌ಮೆ೦ಟಿಗೆ ಏನು ೧೦ ಪರ್ಸೆ೦ಟ್ ಡಿಸ್‌ಕ್ರಿಷನರಿ ಕೋಟಾ ಬಿಟ್ಟು ೨೦ ಸಾವಿರ ಡಾಲರ್ ಮತ್ತು ೨೦ ಸಾವಿರ ಡಾಲರ್‌ಗೆ ಈಕ್ವಲೆ೦ಟ್‌ಗೆ ಕೊಡುವ೦ತಾವರಿಗೆ ಕೊಡುತ್ತೀರಿ ? ಇನ್ನು ಕರ್ನಾಟಕದ ಹುಡುಗರಿಗೆ ೫೦ ಸಾವಿರ ರೂಪಾಯಿ ಕೊಟ್ಟು ಸೇರುವ೦ತಹ ಹುಡುಗರಿಗೆ ಕಿತ್ತು ಹಾಕಿದ್ದೀರಿ ? ೫೯ ಸೀಟುಗಳನ್ನು ಈ ರಾಜ್ಯದ ಮಕ್ಕಳಿಗೆ ಬಿಡುತ್ತಿದ್ದೇವೆ ಎನ್ನುವುದನ್ನು ನೀವು ಕಿತ್ತು ಹಾಕಿದ್ದೀರಿ ? ಈ ೨೦ ಸಾವಿರ ಡಾಲರ್ ಮತ್ತು ಈಕ್ವಲೆ೦ಟ್ ಅಮೌ೦ಟ್ ಎ೦ದು ಏನು ಹೇಳಿದ್ದೀರಿ ಅದನ್ನು ಸಮರ್ಥನೆ ಮಾಡುತ್ತೀರಾ? ಇನ್ನು ಕರ್ನಾಟಕ ರಾಜ್ಯದ ಹುಡುಗರಿಗೆ ಹೇಗೆ ಕೊಡುತ್ತೀರಿ ಇದೆಲ್ಲಾ ತಾವು ಹೇಳುವುದು ಸತ್ಯಕ್ಕೆ ದೂರವಾದುದು. ಆದ್ದರಿ೦ದ ಇವೆರಡರ ಬಗ್ಗೆ ವಿವರಣೆಯನ್ನು ಕೊಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅದು ೨, ಕೋಟಿ ೩೦ ಲಕ್ಷ ಅಲ್ಲ ಸುಮಾರು ೫ಕೋಟಿ ೫೦ ಲಕ್ಷ ರೂಪಾಯಿಗೆ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಹಿ೦ದೆ ಇದ್ದ೦ತಹ ಸರ್ಕಾರ ಉಳಿದಿದ್ದನ್ನು ಮ್ಯಾನೇಜ್‌ಮೆ೦ಟ್‌ಗೆ ಬಿಟ್ಟಿದ್ದರ೦. ಆದ್ದರಿ೦ದ ನಾನು ಏ೦ ಎಸ್ ರಾಮಯ್ಯ ಕಾಲೇಜಿನ ಲೆಕ್ಕವನ್ನು ಸೇರಿಸಿಲ್ಲ.

SRI A. K A. SAMAD.—Sri Deve Gowda has stated that to avoid commercialisation of Medical education, the Government has taken certain steps which are not progressive. To run effectively, each college requires about 40–45 lakhs of rupees. Keeping this in view we have allotted seats for those who pay special tuition fees and not capitation fees. This special fees includes all the fees until the boy completes the education for a period of 5 years which comes to about 40 lakhs of rupees. Last year we had allotted 15 seats at the rate

of Rs. 50,000 per seat and 25 seats at the rate of 1.25 lakhs which comes to about Rs. 40 lakhs, that means we have reduced the number of seats last year in respect of capitation fee. Those who can afford to pay are required to pay so much. Last year we had only 50 seats for the merited students. This year we have raised it to 65. There is thus an increase of 15 seats. With regard to US Dollars, I may say that there are number of Indians working in overseas countries. On account of certain drawbacks, may be due to colour or otherwise they have not been given educational facilities in those institutions. They feel that ' we are Indians, we are serving the country's interest in overseas and our children should get an opportunity to study in our mother-land'. Keeping that in view, we have fixed 20 thousand dollars for admission in the medical colleges. This would help our country to earn foreign exchange. Secondly, they are given a chance to see that our students will get an opportunity to study in our institutions. It is only to facilitate them that we have given preference to those who give 20 thousand dollars. In respect of the other 5 seats, the amount realised has to be utilised under the directives of I. M. C. The Institution cannot utilise this money to build a stadium or to build a drawing hall. This amount should be earmarked for the purpose that is prescribed by the Indian Medical Council. So if you deduct this, the actual amount comes only to Rs. 30 lakhs.

SRI H. D. DEVE GOWDA.—According to the first para of the reply 50%of the seats are allotted to students of Karnataka, without charging capitation fees. These seats have to be allotted by the Selection Committee according to the previous Government Order. According to the Appendix to the reply it is seen that out of hundred seats 50 seats will go to Belgaum Medical College and the rest to the JJM Medical college. According to my calculation the number of seats comes to about 195 seats for merited students that too without charging any capitation fees.

SRI A. K. A. SAMAD.—According to the Goverment Medical Colleges, we have increased the seats from 50 to 65. Out of the remaining 35 seats, ten are left to the discretion of the management because they have sacrificed in building their institutions and there we do not come into the picture at all. Out of the remaining 25 seats, 20 seats will be given to those who can afford to pay 20 thousand US dollars. The amount realised out of the remaining 5 seats will have to be utilised under the directives of the I. M. C. The Indian Medical Council is the controlling authority for the proceeds of the 5 seats. The proceeds of the 20 seats will go to the

management for its working because as already stated by me; the institutions requires around 40–45 lakhs of rupees for its running.

ಶ್ರೀ ಎಚ್. ಡಿ. ದೇವೇಗೌಡ.–ಹೋದವರ್ಷ ಮಾಡಿದಂತಹ ಒಂದು ಪದ್ಧತಿಯ ಪ್ರಕಾರ ೧೯೫ ಸೀಟುಗಳನ್ನು ೯ ಇನ್‌ಸ್ಟಿಟ್ಯೂಷನ್‌ಗಳಿಂದ ಮೆರಿಟ್ ಮೇಲೆ ತೆಗೆದುಕೊಳ್ಳುತ್ತಾರೆ ಎಂದು ಬಂದುಕ್ಕಾಲು ಲೆಟ್ ಮಾಡುತ್ತಾರೆ. ಕಳೆದ ಸಾರಿ ಎಂ. ಎಸ್. ರಾಮಯ್ಯನವರ ಕಾಲೇಜಿಗೆ ಒಂದು ಷರತ್ತನ್ನು ಹಾಕಿದ್ದರು. ಈ ವರ್ಷ ಒಂದು ಹೊಸ ನಿಯಮಾವಳಿಯನ್ನು ತರುವುದಕ್ಕೆ ಪ್ರಾರಂಭಮಾಡಿದ್ದಾರೆ. ಇದರಲ್ಲಿ ಇವರು ಏನು ಹೇಳುತ್ತಾರೆ ಎಂದರೆ ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್‌ನವರು ಒಪ್ಪಿಗೆ ಕೊಟ್ಟಮೇಲೆ ಅಡ್ಮಿಷನ್ ಮಾಡಬೇಕು ಎಂದು ಹೇಳುತ್ತಾರೆ. ಆದಕ್ಕೋಸ್ಕರ ನಾನು ಈ ಲೆಕ್ಕದಲ್ಲಿ ಕಂಡರಕೊಂಡಿದ್ದು ಏನು ಎಂದರೆ ೧೯೫–೨೫೩ ಸೀಟುಗಳನ್ನು ಜನರಲ್ ಮೆರಿಟ್ ಪೂಲ್‌ನಲ್ಲಿ ಕೊಡುವಾಗ ಅದರಲ್ಲಿ ೨೦ ಸೀಟುಗಳನ್ನು ಯುನೈಟೆಡ್ ಸ್ಟೇಟಿನ ೨೦ ಸಾವಿರ ಡಾಲರುಗಳಂತೆ ಕೊಡಬೇಕೆಂದು ಮಾಡಿಕೊಂಡಿದ್ದೀವೆ. ಎಂದು ಹೇಳಿದರು. ಈ ರೀತಿ ಮೆಡಿಕಲ್ ಸೀಟುಗಳನ್ನು ಕೊಡುವುದಾದರೆ ಕರ್ನಾಟಕದಲ್ಲಿರುವ ಮಕ್ಕಳ ಗತಿಏನು ? ಹಳ್ಳಿಗಳಲ್ಲಿರತಕ್ಕ ಸಾಮಾನ್ಯ ರೈತರ ಮಕ್ಕಳ ಗತಿ ಏನು ? ಯಾರು ಈ ಪ್ರಪೋಜಲ್‌ನ್ನು ನಿಮ್ಮ ಮುಂದೆ ಇಟ್ಟರು ? I will take a challenge that how you are going to provide seats to the rural people who come under General Merit category.

ಶ್ರೀ ಡಿ. ದೇವೆರಾಜ ಅರಸ್.—ಸ್ವಾಮಿ, ಕರ್ನಾಟಕದಲ್ಲಿ ಮೆಡಿಕಲ್ ಕಾಲೇಜಿಗೆ ಸೇರಿಕೊಳ್ಳಲು ಕೆಲವರಿಗೆ ಕ್ಯಾಪಿಟೇಷನ್ ಫೀಜ್ ೩೦ ಸಾವಿರ ರೂಪಾಯಿಗಳು ಇತ್ತು. ಅದು ಆ ಮೇಲೆ ೫೦ ಸಾವಿರ ರೂಪಾಯಿಗಳು ಆಯಿತು. ಷೆಡ್ಯೂಲ್ ಕ್ಯಾಸ್ಟ್ ಹುಡುಗರಿಗೆ ಸರ್ಕಾರದವರೇ ಹಣ ಕೊಡುತ್ತಿದ್ದರು. ಮತ್ತೆ ಇತರ ವಿಚಾರ ನನಗೆ ಗೊತ್ತಿಲ್ಲ. ಕರ್ನಾಟಕದ ಜನರಿಗೆ ಮೆರಿಟ್‌ನಲ್ಲಿ ಸೀಟ್ ಸಿಕ್ಕದಿದ್ದರೆ ೫೦ ಸಾವಿರ ರೂಪಾಯಿ ಗಳನ್ನು ಕ್ಯಾಪಿಟೇಷನ್ ಫೀಜ್ ಆಗಿ ಕೊಟ್ಟು ಸೇರಿಕೊಳ್ಳಬೇಕು ಎಂದು ಇತ್ತು. ಹರಿಜನಗಿರಿಜನರು ರಿಜರ್ವೇಷನ್‌ನಲ್ಲಿ ಬರುವುದರಿಂದ ಅವರು ಕ್ಯಾಪಿಟೇಷನ್ ಫೀಜ್ ಕೊಡಬೇಕಾಗಿಲ್ಲ. ಈಗ ಒಟ್ಟು ೬ ಇನ್‌ಸ್ಟಿಟ್ಯೂಷನ್‌ಗಳಿಂದ ಇರುವುದು ೬೫೦ ಸೀಟುಗಳು. ಇದರಲ್ಲಿ ೩೫೮ ಸೀಟುಗಳನ್ನು ಕಮಿಟಿಯವರು ಹಂಚುತ್ತಾರೆ; ೯೯ ಸೀಟುಗಳನ್ನು ೨೦ ಸಾವಿರ ಡಾಲರ್‌ನಂತೆ ತೆಗೆದುಕೊಳ್ಳಲು ಅಲ್ಲಿಯ ಸೆಲೆಕ್ಷನ್ ಕಮಿಟಿಯವರ ಅಲಾಟ್‌ಮೆಂಟ್‌ಗೆ ಕೊಟ್ಟು ಬಿಟ್ಟಿದ್ದೀರಿ. ಇನ್ನು ಉಳಿದ ೨೪ ಸೀಟುಗಳನ್ನು ಅಲಾಟ್ ಮಾಡುವುದಕ್ಕೆ on payment of special tuition fee equivalent to so much of amount. ಎಂದು ಹೇಳಿದ್ದೀರಿ ೯೯ ಮತ್ತು ೨೪ ಇವೆ ರಡನ್ನೂ ಸೇರಿಸಿ ಒಟ್ಟು ಎಷ್ಟು ಹಣ ಬರುತ್ತದೆ ಎನ್ನುವುದನ್ನು ಲೆಕ್ಕ ಹಾಕಿದರೆ ಸುಮಾರು ೧೨ ಲಕ್ಷ ಡಾಲರ್ಸ್ ಮೇಲೆ ಆಗುತ್ತದೆ. ಒಟ್ಟು ಎಲ್ಲವನ್ನೂ ಸೇರಿಸಿ ಲೆಕ್ಕ ಹಾಕಿದರೆ ೫ ಕೋಟಿ ೫೦ ಲಕ್ಷ ರೂಪಾಯಿ ಬರುತ್ತದೆ. ಈ ೫ ಕೋಟಿ ರೂಪಾಯಿಯನ್ನು ಈ ೬ ಸಂಸ್ಥೆಗಳಿಗೆ ಹಂಚಿದರೂ ಕೂಡ ಹೆಚ್ಚು ಕಡಿಮೆ ಒಂದೊಂದು ಕೋಟಿ ರೂಪಾಯಿಗಳು ಒಂದೊಂದು ಸಂಸ್ಥೆಗೆ ಬರುತ್ತದೆ. ಇವರ ಒಂದು ಲೆಕ್ಕವನ್ನು ತೆಗೆದು ನೋಡಿದರೆ ಈ ಒಂದೊಂದು ಸಂಸ್ಥೆಯಲ್ಲಿ ೪೦–೪೫ ಅಥವಾ ೫೦ ಲಕ್ಷ ರೂಪಾಯಿಗಳ ಮೇಲೆ ಖರ್ಚಾಗುವುದಿಲ್ಲ. ಅವರಿಗೆ ಇದರಿಂದ ಲಾಭ ಹೆಚ್ಚು ಕಡಿಮೆ ೧೦ ಲಕ್ಷ ರೂಪಾಯಿಯಷ್ಟು ಹಣ ಬಂದಾಗುತ್ತದೆ. ಇದರ ಜೊತೆಗೆ ನಮ್ಮ ಕರ್ನಾಟಕದ ಹುಡುಗರಿಗೆ ಇದರಲ್ಲಿ ಏನು ಒಂದು ರಿಯಾಯಿತಿ ಇತ್ತು ಅದು ಇಲ್ಲದಂತಾಗುತ್ತದೆ. ಇದರ ಬಗ್ಗೆ ದಯವಿಟ್ಟು ವಿವರಣೆ ಹೇಳುತ್ತೀರಾ ?

ಶ್ರೀ ಎಂ. ಆನಂದರಾವ್.–ನಾನು ಅರ್ಥ ಮಾಡಿಕೊಂಡಿರುವ ಹಾಗೆ ಸರ್ಕಾರದವರು ೬೫ ಪರ್ಸೆಂಟ್ ನಷ್ಟು ಸೀಟುಗಳನ್ನು ಮೆರಿಟ್ ಪ್ರಕಾರ ಅಲಾಟ್ ಮಾಡುತ್ತಾರೆ. ಇನ್ನು ಉಳಿದ ೩೫ ಪರ್ಸೆಂಟ್ ನಷ್ಟು ಸೀಟು ಗಳನ್ನು ಶುದ್ಧ ವ್ಯಾಪಾರ ಮಾಡುವ ಹಾಗೆ ಮಾಡಿ ಬಿಟ್ಟಿದ್ದಾರೆ ಇದರ ಜೊತೆಗೆ ೧೦ ಪರ್ಸೆಂಟ್ ನಷ್ಟು ಸೀಟುಗಳನ್ನು ಮ್ಯಾನೇಜ್‌ಮೆಂಟಿನವರ ವ್ಯಾಪಾರಕ್ಕೆ ಕೊಟ್ಟುಬಿಟ್ಟಿದ್ದಾರೆ. ನೀವು ೨೦ ಸಾವಿರ ಅಮೇರಿಕನ್ ಡಾಲರ್ಸ್ ತೆಗೆದುಕೊಳ್ಳಬಹುದುಎಂದು ಮ್ಯಾನೇಜ್‌ಮೆಂಟಿನವರಿಗೆ ಬಿಟ್ಟು ಬಿಡ್ತೀವಿದಾದರೆ ಅಥವಾ ಎಷ್ಟು ಬೇಕಾದರೂ ಹಣ ತೆಗೆದುಕೊಳ್ಳಿ ಎಂದು ಹೇಳುವುದಾದರೆ ಅವರು ೫ ಲಕ್ಷ ರೂಪಾಯಿ ಬೇಕಾದರೂ ತೆಗೆದುಕೊಳ್ಳಬಹುದು. ಇದು ಒಂದು ಕಡೆ. ಇನ್ನೊಂದು ಈಗ ಸರ್ಕಾರದವರು ಮೆರಿಟ್‌ಗೆ ೬೫ ಪರ್ಸೆಂಟ್ ಏನು ಅಲಾಟ್ ಮಾಡುತ್ತಾರೋ ಅದರಲ್ಲಿ ೧೮ ಪರ್ಸೆಂಟ್ ರಿಸರ್ವೇಷನ್‌ಗೆ ಸ್ವಲ್ಪ

ಹೋಗುತ್ತವೆ, ಇನ್ನಷ್ಟು ಬ್ಯಾಕ್‌ವರ್ಡ್ ಕ್ಲಾಸ್-ಅದು, ಇದು ಅಂತ ಕೆಲವು ರಿಸರ್ವೇಷನ್‌ಗೆ ಸ್ವಲ್ಪ ಹೋಗುತ್ತದೆ. ಹೀಗಿರುವುದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುವುದೇನೆಂದರೆ ಹಾವನೂರು ಕಮಿಟಿಯ ವರದಿ ಪ್ರಕಾರ ಬ್ರಾಹ್ಮಣರು, ಲಿಂಗಾಯಿತರು ಇನ್ನು ಇತರರು ಜನರಲ್ ಪೂಲ್‌ನಲ್ಲಿ ಏನು ಬರುತ್ತಾರೆ ಅವರಿಗೆ ಎಚ್ಚು ಪರ್ಸೆಂಟ್ ಬರುತ್ತದೆ ಎನ್ನುವುದನ್ನು ಹೇಳಬೇಕು.

ಇನ್ನು ಎರಡನೆಯದಾಗಿ, ಇದು ಒಂದು ವ್ಯಾಪಾರವಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಹಾಗಾದರೆ ಇದು ಕಮರ್ಷಿಯಲ್ ಏಜುಕೇಷನ್ ಅಲ್ಲವೇ ಎಂದು ನಾನು ಕೇಳುತ್ತೇನೆ. ಏತಕ್ಕೆಂದರೆ, ೩೫ ಪರ್ಸೆಂಟ್ ಅಷ್ಟು ಸೀಟುಗಳನ್ನು ಮಾರಿಕೊಳ್ಳುವ ಹಾಗೆ ಮಾಡಿದ್ದೀರಿ. ಮಾನ್ಯ ದೇವೇಗೌಡರು ಹೇಳಿದ ಪ್ರಕಾರ ಕರ್ನಾಟಕದಲ್ಲಿರುವ ಈ ಕಾಲೇಜುಗಳಲ್ಲಿ ಮೆರಿಟ್ ಪೂಲ್‌ನಲ್ಲಿ ಯಾರಿಗಾದರೂ ಸೀಟು ಸಿಕ್ಕದೇ ಹೋಗಿದ್ದರೆ, ಕರ್ನಾಟಕದಲ್ಲಿರುವ ರೈತರು, ಕೆಲವರು ಇದ್ದಾರೆ, ಅವರು ೫೦ ಸಾವಿರ ರೂಪಾಯಿನವರಿಗಾದರೂ ಹಣ ಕೊಡುತ್ತಿದ್ದರು ಈಂಥಾವರು ದುಡ್ಡನ್ನಾದರೂ ಕೊಟ್ಟು ತಮ್ಮ ಹುಡುಗರನ್ನು ಇಲ್ಲಿನಮೆಡಿಕಲ್ ಕಾಲೇಜಿಗೆ ಸೇರಿಸುತ್ತಿದ್ದರು, ಆ ಅವಕಾಶ ಹಿಂದೆ ಇತ್ತು. ಈಗ ಅದೂ ತಪ್ಪಿ ಹೋಗಿದೆ.

ಶ್ರೀ ಎಸ್. ಗೋವಿಂದಗೌಡ.—ಮೊದಲೂ ಸಹ ೫೦ ಸಾವಿರ ರೂಪಾಯಿ ಕೊಟ್ಟರೂ ಸಿಟಿ ಒಳಗೆ ಇರತಕ್ಕಂಥಾ ಹುಡುಗರಿಗೆ ಸಿಕ್ಕುತ್ತಿತ್ತೇ ವಿನಹ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥಾ ಹುಡ್ಗ ರಿಗೆ ಸಿಗುತ್ತಾ ಇರಲಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಸದಸ್ಯರು ಸರಿಯಾಗಿ ತಿಳಿದು ಕೊಂಡಿಲವೆಂದು ಕಾಣುತ್ತದೆ. ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥಾ ಹುಡುಗರಿಗೂ ಇಲ್ಲಿನ ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಸಿಗುತ್ತಿತ್ತು. ಈಗ ೬೫ ಪರ್ಸೆಂಟ್ ಅಷ್ಟು ಸೀಟ್ಟುಗಳು ಮೆರಿಟ್ ಪ್ರಕಾರ, ಇನ್ನು ೩೫ ಪರ್ಸೆಂಟ್ ಅಷ್ಟು ಸೀಟ್‌ಗಳು ವ್ಯಾಪಾರ ಮಾಡಿದ ಹಾಗೆ ಮಾಡಿರುವುದರಿಂದ ಇನ್ನು ಮುಂದೆ ನಮ್ಮ ಕರ್ನಾಟಕದಲ್ಲಿರತಕ್ಕಂಥಾ ಹುಡುಗರಿಗೆ ಸಿಕ್ಕುವಂಥಾ ಅವಕಾಶವೂ ಇಲ್ಲವಾಗಿದೆ. ಸಾಮಾನ್ಯವಾಗಿ ಈ ವ್ಯಾಪಾರವೆಲ್ಲಾ ಈ ವ್ಯಕ್ತಿಗಳಿಗೇ ಹೋಗುತ್ತದೆ ವಿನಾ ನಮಗೇನೂ ಪ್ರಯೋಜನವಾಗುವುದಿಲ್ಲ. ಮಾನ್ಯ ದೇವೇಗೌಡರು ಇದರ ಬಗ್ಗೆ ಚೆನ್ನಾಗಿ ವಿವರಣೆಯನ್ನು ಹೇಳಿದ್ದಾರೆ. ಹೇಗೆಂದರೆ ನಮ್ಮ ಕರ್ನಾಟಕದಲ್ಲಿ ಯಾವ ರೈತ ತಾನೆ ಒಂದೊಂದು ಸೀಟಿಗೆ ೨೦ ಸಾವಿರ ಡಾಲರ್‌ಗೆ ಸರಿಸಮಾನವಾದ ಇಲ್ಲಿನ ದುಡ್ಡು ಕೊಟ್ಟು ತನ್ನ ಮಗನನ್ನು ಸೇರಿಸುವಂಥಾ ವ್ಯಕ್ತಿ ಇದ್ದಾನೆ ಹೇಳಿ ? ಇವರು ಒಂದೊಂದು ಸೀಟಿಗೂ ೨೦ ಸಾವಿರ ಡಾಲರ್ಸ್‌ಗೆ ಮಾರಿಕೊಳ್ಳುವುದರಿಂದ ನಮ್ಮ ಕರ್ನಾಟಕ ರಾಜ್ಯದ ಮಾನಮರ್ಯಾದೆ ಮಾರಿದ ಹಾಗಾಗಲಿಲ್ಲವೇ ?

ಅಧ್ಯಕ್ಷರು.—ತಮಗೆ ನಿಜವಾಗಿ ಹೇಳಬೇಕಾದರೆ ಇದರ ಮೇಲೆ ಮಾತನಾಡುವುದಕ್ಕೆ ತಮಗೆ ಅವಕಾಶ ಕೊಡಬಾರದಾಗಿತ್ತು. ಆದರೂ ಕೊಟ್ಟಿದ್ದೇನೆ. ಆದುದರಿಂದ ತಾವು ಈಗ ಇರತಕ್ಕಂಥಾ ವಿಷಯದ ಮೇಲೆ ಮಾತನಾಡಿ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ನಾನು ಕೇಳುತ್ತೇನೆ ೨೦ ಸಾವಿರ ಅಮೇರಿಕನ್ ಡಾಲರ್ಸ್‌ಗೆ ಈ ಸೀಟುಗಳನ್ನು ಮಾರುವುದು ಏಂದರೆ ನಮ್ಮ ಕರ್ನಾಟಕದ ಮಕ್ಕಳನ್ನುಮಾರಿದ ಹಾಗಾಗಲಿಲ್ಲವೇ ? ಇದು ಯಾವ ನೀತಿಗನುಗುಣವಾಗಿದೆ ಎನ್ನುವುದರ ಬಗ್ಗೆ ನನಗೆ ಕ್ಲಾರಿಫಿಕೇಷನ್ ಕೊಡಿ. ಎರಡನೆಯದಾಗಿ, ನಮ್ಮ ಕರ್ನಾಟಕದಲ್ಲಿರುವ ಯಾವ ಪ್ರಜೆಯೇ ಆಗಲಿ ೨೦ ಸಾವಿರ ಅಮೇರಿಕನ್ ಡಾಲರ್‌ಗೆ ಸರಿಸಮಾನವಾಗಿ ಇರತಕ್ಕಂಥಾ ಇಲ್ಲಿನ ರೂಪಾಯಿಗಳನ್ನು ಕೊಡುವೇಕು ಎಂದರೆ ಯಾರಿಗೆ ಕೊಡುವುದಕ್ಕೆ ಸಾಧ್ಯ ಹೇಳಿ ? ಕೊನೆಯದಾಗಿ, ಮೆರಿಟ್ ಪ್ರಕಾರ ೬೫ ಪರ್ಸೆಂಟ್ ಇಟ್ಟಿದ್ದೀರಿ. ಇನ್ನು ಉಳಿದ ೩೫ ಪರ್ಸೆಂಟ್ ಸೀಟುಗಳನ್ನು ಮಾರುವುದಕ್ಕೆ ಏನು ಇಟ್ಟಿದ್ದೀರಿ ಇದರಿಂದ ಯಾವನಾದರೂ ಕೂಡ ಓದಿ ಅವನು ಡಾಕ್ಟರ್ ಆದರೆ ಜನರಿಂದ ಫ್ಯಾಬಿಲಿ ಪ್ಲಾನಿಂಗ್‌ನ ಒಂದು ಪರಿಣಾಮ ಎಷ್ಟರ ಮಟ್ಟಿಗೆ ಆಗಬಹುದು ಎನ್ನುವುದನ್ನೂ ಕೂಡ ಯೋಚನೆ ಮಾಡಿದ್ದೀರಾ ? ದಯವಿಟ್ಟು ನಾನು ಕೇಳಿರ ತಕ್ಕಂಥಾ ವಿಷಯಗಳಿಗೆ ಕ್ಲಾರಿಫಿಕೇಷನ್ ಕೊಡಬೇಕೆಂದು ಪ್ರಾರ್ಥನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಈ ವಿಷಯವಾಗಿ ಬಹಳವಾಗಿ ಹೇಳಿದ್ದಾರೆ. ನಾನು

ಹೇಳುವುದೇನೆಂದರೆ, ಈಗ ನೀವು ಈರೀತಿ ಮಾಡುವುದರಿಂದ ಈ ಸಂಸ್ಥೆಗಳಿಗೆ ಒಂದು ಹೆಚ್ಚಿನ ಉತ್ಪನ್ನದನೆ ಬಂದಂತಾಗುತ್ತದೆ. ಹೇಗೆಂದರೆ ಈಗ ಈ ಸಂಸ್ಥೆಗಳಿಗೆ ೧೬೯ ಸೀಟುಗಳ ಹಂಚಿಕೆ ಮತ್ತು ಹಣ ತೆಗೆದುಕೊಳ್ಳುವ ಬಗ್ಗೆ ಮ್ಯಾನೇಜ್‌ಮೆಂಟ್‌ನವರ ಒಂದು ಡಿಸ್ಕ್ರಿಷನ್‌ಗೆ ಬಿಟ್ಟುಬಿಟ್ಟಿರುವುದರಿಂದ ಅವರು ಬೇಕಾದ ಹಾಗೆ ವಸೂಲ್ಮಾಡುತ್ತಾರೆ. ಇದರಿಂದ ಅವರಿಗೆ ೫ ಕೋಟಿ ರೂಪಾಯಿ ಉತ್ಪಾದನೆ ಬಂದ ಹಾಗಾಗುತ್ತದೆ...

SRI D. DEVARAJ URS.—I am sorry. It is not 5 crores. It will come to 2 crores.

ಶ್ರೀ ಎಸ್. ಆರ್. ಬೊಮ್ಮಾಯಿ.—ಎರಡು ಕೋಟಿಯೇ ಇರಬಹುದು. ಈ ೧೬೯ ಸೀಟುಗಳಲ್ಲಿ ಮ್ಯಾನೇಜ್‌ಮೆಂಟ್‌ನವರು ಒಂದೊಂದು ಸೀಟಿಗೆ ೧-೧½ ಲಕ್ಷ ರೂಪಾಯಿಗಳನ್ನು ಏನು ತೆಗೆದುಕೊಳ್ಳುತ್ತಾರೆ ಅದರ ಬಗ್ಗೆ ಸರಿಯಾಗಿ ತಮಗೆ ಲೆಕ್ಕ ತೋರಿಸುತ್ತಾರೆಯೇ ? ಈ ಸಂಸ್ಥೆಗೆ ಕೊಟ್ಟಂಥಾ ಹಣ ಸರಿಯಾಗಿ ಜಮಾ ಆಗುತ್ತದೆಯೇ ಇಲ್ಲವೇ ಎನ್ನುವುದಕ್ಕೆ ಯಾರನ್ನಾದರೂ ಸೂಪರ್‌ವಿಜನ್ ಮಾಡಲಿಕ್ಕೆ ಇಟ್ಟಿದ್ದೀರಾ ? ಅವರು ಮಾಡುವುದು ಎಲ್ಲಾ ಗೊತ್ತಿದೆ. ಒಂದು ಲಕ್ಷ ತೆಗೆದುಕೊಂಡು ೫೦ ಸಾವಿರ ಬಂದಿದೆ ಎಂದು ಜಮಾ ತೋರಿಸುವುದೂ ಗೊತ್ತಿದೆ. ಇದನ್ನು ಸೂಪರ್‌ವಿಷನ್ ಮಾಡುವುದಕ್ಕೆ ಯಾರನ್ನಾ ಇಟ್ಟಿದ್ದೀರಿ ?

ಎರಡನೆಯಾದಾಗಿ, ನೀವು ೫೦ ಪರ್ಸೆಂಟ್ ಇದ್ದುದನ್ನು ೬೫ ಪರ್ಸೆಂಟ್‌ಗೆ ಮೆರಿಟ್ ಸೀಟುಗಳನ್ನು ಏನು ಏರಿಸಿದ್ದೀರಿ ಅದು ಒಂದು ಪ್ರೋಗ್ರೇಸಿವ್ ಮೆಜರ್ಸ್ ಎಂದು ಹೇಳುತ್ತೇನೆ. ಆದರೆ ಮೊದಲು ಇಲ್ಲಿ ೫೦ ಸಾವಿರ ಅಂತ ಒಂದು ಮಿತಿ ಏನು ಇಟ್ಟುಕೊಂಡಿದ್ದರು ಈ ಮೆರಿಟ್‌ನಲ್ಲಿ ಹುಡುಗರಿಗೆ ಸೀಟು ಸಿಕ್ಕದೇ ಹೋಗಿದ್ದರೆ ಅದರಲ್ಲಿ ಸಿಗುವ ಅವಕಾಶ ಇತ್ತು. ಈಗ ನಮ್ಮ ಕರ್ನಾಟಕದಲ್ಲಿರುವ ಮಕ್ಕಳಿಗೆ ನೀವು ಈರೀತಿ ಮಾಡಿದ್ದರಿಂದ ಆ ಅವಕಾಶವೂ ಹೋಯಿತು. ಆ ಒಂದು ಅವಕಾಶವನ್ನು ನಮ್ಮ ಕರ್ನಾಟಕದ ಮಕ್ಕಳಿಗೆ ಪುನಃ ಕೊಡುವುದಕ್ಕೆ ಪ್ರಯತ್ನ ಮಾಡುವಿರಾ?

ಮೂರನೆಯದಾಗಿ ಮಂಗಳೂರಿನಲ್ಲಿರತಕ್ಕಂಥಾ ಎರಡು ಕಾಲೇಜುಗಳಿಗೂ ಕೂಡ ಮ್ಯಾನೇಜ್‌ಮೆಂಟ್ ಕೋಟಾ ೭೦–೭೦ ಎಂದು ಕೊಟ್ಟಿದ್ದೀರಿ, ಉಳಿದ ಎಲ್ಲಾ ಕಾಲೇಜುಗಳಿಗೂ ಕೋಟಾ ೧೦–೧೦ ಕೊಟ್ಟಿದ್ದೀರಿ, ಈ ತಾರತಮ್ಯ ಏತಕ್ಕೆ ? ಆ ಮೆಡಿಕಲ್ ಕಾಲೇಜಿನಲ್ಲಿ ಶ್ರೀಮತಿಯವರು ಇದ್ದಾರೆ ಅಂತಲೋ ಅಥವಾ ಅಲ್ಲಿ ಪ್ರಭಾವಶಾಲಿಯಾದಂಥಾ ವ್ಯಕ್ತಿಗಳು ಇದ್ದಾರೆ ಅಂತಲೋ ? ಇರತಹ ತಾರತಮ್ಯ ತೋರಿಸಿರುವುದು ಏತಕ್ಕೆ ? ಇದರ ಬಗ್ಗೆ ನಿಮ್ಮ ನಿಲುವು ಏನು ಅಂತ ತಿಳಿಸಬೇಕು.

ಇನ್ನು ನಾಲ್ಕನೆಯದಾಗಿ, ಗುಲ್ಬರ್ಗಾದಲ್ಲಿರುವ ಮೆಡಿಕಲ್ ಕಾಲೇಜಿಗೆ ಅಲ್ಲಿನ ಏರಿಯಾದಲ್ಲಿರುವಂಥಾ ಮಕ್ಕಳಿಗೆ ಒಂದು ಪ್ರಾವಿಷನ್ ಮಾಡಿದ್ದೀರಿ. ಇಷ್ಟು ಪರ್ಸೆಂಟೇಜ್ ಸೀಟುಗಳನ್ನು ಆ ಏರಿಯಾದ ಮಕ್ಕಳಿಗೆ ಕೊಡಬೇಕು ಎಂದು ಮಾಡಿದ್ದೀರಿ, ಅದೇ ರೀತಿಯಾಗಿ ಬೆಳಗಾಂ ಏರಿಯಾದಲ್ಲಿರತಕ್ಕಂಥಾ ಮಕ್ಕಳಿಗೆ ಇಷ್ಟು, ದಾವಣಗೆರೆ ಏರಿಯಾಕ್ಕೆ ಸೇರಿರತಕ್ಕಂಥಾ ಮಕ್ಕಳಿಗೆ ಇಷ್ಟು, ಹೀಗೆ ಆಯಾಯ ಪ್ರದೇಶದಲ್ಲಿರತಕ್ಕಂಥಾ ಮಕ್ಕಳಿಗೆ ಇಷ್ಟು ಸೀಟುಗಳನ್ನು ಕೊಡಬೇಕು ಎಂದು ಒಂದು ಪ್ರಾವಿಷನ್ ಏತಕ್ಕೆ ಮಾಡಿಲ್ಲಾ ? ಎಲ್ಲೆಲ್ಲಿ ದಾನಿಗಳಾಗಲಿ ಅಥವಾ ಸಂಸ್ಥೆಗಳಾಗಲಿ ಮುಂದೆ ಬಂದು ನಡೆಸುತ್ತಿದ್ದಾರೋ, ಅಂಥಾ ಕಡೆ ಈರೀತಿ ಏತಕ್ಕೆ ಮಾಡಬಾರದು ? ನಾವು ಮೊದಲಿನಿಂದಲೂ ಕೂಡ ಈ ಬಗ್ಗೆ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಈ ರೀತಿ ಮಾಡದೇ ಹೋದರೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕಂಥಾ ಮಕ್ಕಳಿಗೆ ಬಹಳ ಅನ್ಯಾಯವಾಗುತ್ತದೆ. ಗುಲ್ಬರ್ಗಾ ಕಾಲೇಜಿಗೆ ಏನು ಒಂದು ನಿಯಮ ಮಾಡಿದ್ದೀರೋ ಅದೇರೀತಿಯಾಗಿ ಬೆಳಗಾಂ, ದಾವಣಗೆರೆ, ರಾಮಯ್ಯ ಕಾಲೇಜು ಮತ್ತು ಮಂಗಳೂರು ಕಾಲೇಜಿಗೆ ಏತಕ್ಕಾಗಿ ಈ ನಿಯಮ ಅನ್ವಯಿಸಲಿಲ್ಲ ? ಈ ಬಗ್ಗೆ ಮಾನ್ಯ ಮಂತ್ರಿಯವರಿಂದ ವಿವರಣೆಯನ್ನು ಕೇಳಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್—ಸುಮಾರು ೯೯ ಸೀಟುಗಳನ್ನು ೨೦ ಸಾವಿರ ಅಮೇರಿಕನ್ ಡಾಲರ್ಸ್‌ಗೆ ಅಂತ ಏನು ಇಟ್ಟಿದ್ದೀರೋ ಇದರಿಂದ ಆಗುವ ಪರಿಣಾಮ ಏನು ಎಂದರೆ ಅವರು ಇಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡ ಮೇಲೆ ಮತ್ತೆ ಆ ದೇಶಕ್ಕೆ ಹೊರಟು ಹೋಗಿ ದುಡ್ಡು ಸಂಪಾದನೆ ಮಾಡಿಕೊಳ್ಳುತ್ತಾರೆ. ಇದರಿಂದ ನಮ್ಮ ರಾಜ್ಯಕ್ಕೆ ಬಂದುಂಥಾ ಲಾಭ ಏನು ? ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿಕೊಳ್ಳುತ್ತಾರೆ. ಇದರಿಂದ ಅವರು ಒಂದು ಹೆಚ್ಚಿನ ಲಾಭ ಮಾಡಿಕೊಂಡ ಹಾಗೆ

ಆಯಿತೇ ವಿನಹ ನಮಗೇನೂ ಪ್ರಯೋಜನವಾಗುವುದಿಲ್ಲ, ಮತ್ತಷ್ಟು ನಷ್ಟವಾಗುತ್ತದೆ. ಹೇಗೆಂದರೆ ನಮ್ಮ ಕರ್ನಾಟಕದಲ್ಲಿ, ಮೆರಿಟ್‌ನಲ್ಲಿ ಈ ಮೆಡಿಕಲ್ ಕಾಲೇಜಿಗೆ ಸೀಟು ಸಿಗದೆ ಹೋಗಿದ್ದರೆ ೫೦ ಸಾವಿರ ರೂಪಾಯಿ ಕೊಟ್ಟು ಅವರ ಮಕ್ಕಳನ್ನು ಸೇರಿಸುವಂಥಾ ಜನ ಇದ್ದಾರು. ಇದರಿಂದ ನಮ್ಮ ಕರ್ನಾಟಕಕ್ಕೆ ನಮ್ಮ ಜನರಿಗೆ ನಷ್ಟವಾಯಿತೇ ವಿನಾ ಲಾಭವಾಗಿಲ್ಲ. ಆದುದರಿಂದ ಇದು ಯಾರಿಗೂ ಕೂಡ ಗೌರವ ತರತಕ್ಕಂಥಾದ್ದಲ್ಲ, ಇದು ಸರಿಯಾದ ಕ್ರಮವಲ್ಲ ಎಂದು ಅಷ್ಟು ಮಾತ್ರ ಹೇಳಬಯಸುತ್ತೇನೆ.

12-00 NOON

SRI A. K. ABDUL SAMAD.—Mr. Speaker Sir, the Hon. Member Sri S. R. Bommai has said that way there should be discrimination between one college and the other. In respect of Manipal Section of K.M.C. we have given 40 and 60; 40 seats to be allotted by the Selection Committee and 60 by the management. In respect of St. John's Medical College all the 60 seats to be allotted by the management.

SRI P. RAMDEV.—I would like to know that whether all the 60 seats in St. John's Medical College are distributed on merit basis.

SRI A. K. ABDUL SAMAD.—Mr. Speaker Sir, I will come to that also. The Manipal Section of K.M.C. and the St. John's Medical College do not enjoy hospital facilities from us. For any medical college clinical facilities *i.e.*, hospital facility is a must, and the ratio is 1:7. If they want to have 100 students 700 bedded hospital is a must; otherwise the Indian Medical Council will not give permission to run a college. Manipal Section of K.M.C. and the St. John's Medical College have got their own hospital facilities. We do not spend even a single paise for them. That is why we have discriminated. Yet we have brought them under our discipline and have taken in Manipal section of K.M.C. 40 seats under general pool and 60 under management; whereas for St. John's Medical College, the entire quota is given for the management, because they do not charge any capitation fee at all. The selection system is purely on merit. They charge a fee of Rs. 800 per student whereas we charge only Rs. 400 per student. That is the reason why we have not laid our hands on them. This time we have said that 18% of the seats shall be given to SCs and STs and 1/3 to the citizens of Karnataka. There we have succeeded. In respect of other colleges including the Mangalore Section of the K.M.C., the hospital facilities are ours and they are running the college. Therefore, we have said that 65 seats are ours and the remaining 35 seats are theirs. Similarly for other colleges also the hospital facilities are provided by us. In respect of Gulbarga college we have given only 90 seats, not 100 and the merit seats are only 58 because our bed strength in the hospital is 630. Unless and until we increase the bed strength by 70 we cannot increase the strength to 100. That is why there is some discrimination and in respect of Gulbarga we have done this

for the first time on an experimental basis, like in the industrial field. We have declared back ward areas in respect of starting industries in Mysore and Raichur. Even for the purpose of education, we have decided to have this experimental basis in Gulbarga. If this succeeds this year, the suggestion of Hon. Member Sri Bommai that every area must be given reservation will be worth considering.

The urban students are shy to go to the rural areas. We have to encourage the students so that after completion of medical courses they should serve in the rural areas. We will see whether the suggestion of Hon. Member Sri S. R. Bommai could be implemented next year.

Sri Mallur Ananda Rao has stated that the reputation of the State is being affected and that we are selling Karnataka for 20,000 Dollars. I am sorry, it is not a fact. We are not selling seats here. The Hon'ble Member should know that to run a medical college we need certain funds *i. e.*, Rs. 40 to 45 lakhs every year. We have taken the decision after doing a good exercise. We have not done it *suo moto*. Our intention is gradually and progressively to reduce the number of capitation seats and see that all the seats are given on merit to the students in Karnataka. But, because of the paucity of funds and we have also taken up certain schemes in rural areas during the current year, it has not been possible for us to give any grants to these institutions. That is why we have narrowed down this line.

A person who can afford to pay Rs. 60.000 could also afford to pay Rs. 1,50,000 and the number of seats are not meant only for Karnataka. Sri Devaraj Urs and Sri Devegowda have stated that Karnataka students are deprived by this decision. We have the same love and affection for the agriculturists and the rural people as my honourable friends Sri Devaraj Urs and Sri Devegowda have. Can a rural person or a ryot in a village pay Rs. 50,000 for a seat! I do not think so. If a rich farmer can pay Rs. 50,000, he can as well afford to pay Rs. 1,50,000. Such seats are only 20 and 20 rich people can afford to pay this amount.

SRI J. H. PATEL.—The Hon'ble Minister has said that the rural people cannot pay Rs 50,000 for a seat. But, if the father cannot pay some father-in-law can pay.

SRI A. K. ABDUL SAMAD.—If a father-in-law can pay, perhaps that is the reason why this Department has been dominated by sons-in-law and they do not want to go to the villages and they want to stay and in Bangalore only and live in poor class hostels. That is why we are facing this problem.

SRI D. DEVARAJ URS.—Sir, I would like to know one thing from the Hon'ble Minister for Health. In column 3 you have given the number of seats given to each college at the rate of 10, 9, 6 and so on. Accordingly, the total comes to 139. Here I would like to know whether any condition has been laid down by the Government that the management should take this much of money or are they given free hand to take as much capitation fee as they like ?

SRI A. K. ABDUL SAMAD.—Sir, it is absolutely under the discretion of the management, because the founding fathers of these institutions have dedicated themselves for the cause for these institutions and have worked hard for the improvement In that background the issue relating to collection of capitation fee comes entirely under the discretion of the management. I have also discussed this issue with them. I was told that sometimes they do not charge at all.

SRI D. DEVARAJ URS.—I am aware of the fact that each institution has to be given certain amount of seats for running the institutions. Here I would like to point out one thing. In order to meet the expenditure 20,000 dollars has been collected to run these institutions That provision has already been made But here over and above this you have allotted 169 seats. This cannot be done simply because x, y, z has founded these institutions and seats should be given to their son-in-law, brothers in-law and so on. On this point we have serious objection. That apart it is only the people who are coming from outside India can manage to pay 20,000 dollars. It will not be possible to our Indian students to pay capitation fee in terms of dollars even though they have Rs. 2 lakhs. This point has to be considered with all seriousness. Here the argument of the Hon'ble Minister for Health is that we are getting foreign exchange through collection of special tuition fee of 20,000 dollars and the money so collected is going to cover the expenditure to be incurred by these 6 colleges. That is one aspect of the matter. The real aspect of the matter is merely because you are going to earn foreign exchange you cannot deprive our boys from getting some of these seats. That is point No. 1.

The second and most important point is, according to the statement the management got 169 seats. Then, the Hon'ble Minister has said that those seats will be filled up at the discretion of the management. If that is so, where is the guarantee that they are going to give seats to the Karnataka students. They may give the seats to their sons-in-law, brother-in-law. In the previous year we had confined them to collect Rs. 30,000 to Rs. 50,000. But

to-day the position is different. They have given free hand to collect capitation fee as much as they like. There are people who can afford to pay even Rs. 5 lakhs for a seat. It is possible that the management would give seats to those people. Anyway I congratulate hon. Member Mr. Devegowda for having brought this matter by way of Call Attention Motion. But still we need some information in this regard. As suggested by the Chair the scope under the Call Attention Motion is very limited. Therefore, I would like the Government to give us a comparative statement in respect of allotment of seats, so that we could discuss this issue when we take up the demands on Health Department.

ಶ್ರೀ ಎಚ್. ಡಿ. ದೇವೇಗೌಡ — ಸ್ವಾಮಿ, ಮಾನ್ಯ ಆರೋಗ್ಯ ಸಚಿವರು ೫೦ ಸಾವಿರ ರೂಪಾಯಿಗಳನ್ನು ಕೊಡುವವರು ೧ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಕೊಡಬಹುದು ಎಂದು ಸಮರ್ಥನೆ ಮಾಡಿದರು ಮತ್ತು ಇದರಲ್ಲಿ ನಿಮ್ಮಜ್ಜೇ ಆಸಕ್ತಿ ನಮಗೂ ಇದೆ ಎಂದು ಹೇಳಿದರು. ಸ್ವಾಮಿ, ಈ ವಿಚಾರದಲ್ಲಿ ನಾನು ಹೆಚ್ಚಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ. ೨೦ ಸಾವಿರ ಡಾಲರ್‌ಗಳನ್ನು ಕೊಡುವವರು ಯಾರು ? ಹಳ್ಳಿಯವನು ಕೊಡುತ್ತಾನೆಯೇ ? ೫೦ ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀ ಎಂದರೂ ಕೂಡ ವರ್ಷಕ್ಕೆ ೧೦ ಸಾವಿರ ರೂಪಾಯಿಗಳನ್ನು ಅವನು ಸೇವ್ ಮಾಡಬೇಕಾಗುತ್ತದೆ. ವರ್ಷಕ್ಕೆ ೧೦ ಸಾವಿರ ರೂಪಾಯಿಗಳನ್ನು ಉಳಿತಾಯ ಮಾಡತಕ್ಕಂಥ ಚೈತನ್ಯ ರೈತನ ಮಗನಿಗೆ ಇರುವುದಿಲ್ಲ. ಒಟ್ಟಿನಲ್ಲಿ ಹೇಳಬೇಕು ಎಂದರೆ ೫೦ ಸಾವಿರ ರೂಪಾಯಿಗಳನ್ನು ಅವನು ಕೊಡುವುದಕ್ಕೆ ಸಾಧ್ಯವೇ ಇಲ್ಲ. ೧ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಯಾರು ಕೊಡುವುದಕ್ಕೆ ಸಾಧ್ಯವಿದೆ ಎಂದರೆ ಡಾಕ್ಟರುಗಳ ಮಕ್ಕಳು, ಇಂಜಿನಿಯರ್‌ಗಳ ಮಕ್ಕಳು, ಅವರು ೧ ಲಕ್ಷ ೫೦ ಸಾವಿರ ಅಲ್ಲ ೨. ೩. ೪, ಅಥವಾ ೫ ಲಕ್ಷವಾದರೂ ಕೊಡುವುದಕ್ಕೆ ಸಾಧ್ಯವಿರುತ್ತದೆ. ಅಂತಹವರ ಮಕ್ಕಳಿಗೆ ನೀವು ಆಧ್ಯತೆಯನ್ನು ಕೊಟ್ಟಿದ್ದೀರಿ. ಈ ನಾಡಿನಲ್ಲಿ ಹುಟ್ಟಿರತಕ್ಕಂಥ ಹಳ್ಳಿಯ ರೈತನ ಮಗನಿಗೆ ಹಣವನ್ನು ಉಳಿತಾಯ ಮಾಡುವುದಕ್ಕೆ ಸಾಧ್ಯವಿಲ್ಲ, ಅವನಿಗೆ ನೀವು ಕೇಳುವಷ್ಟು ಹಣವನ್ನು ಕೊಡುವುದಕ್ಕೆ ಚೈತನ್ಯ ಇಲ್ಲ, ಅವನಿಗೆ ನೀವು ಆಧ್ಯತೆಯನ್ನು ಕೊಟ್ಟಿಲ್ಲ. ಅಮೆರಿಕಾ, ಇಂಗ್ಲೆಂಡ್‌ನಲ್ಲಿ ಇರತಕ್ಕಂಥವರಿಗೆ ಸೀಟುಗಳನ್ನು ಕೊಡಬೇಕೆಂದು ನಿರ್ಣಯ ಮಾಡುವುದಾದರೆ ಕರ್ನಾಟಕದಲ್ಲಿ ಇರತಕ್ಕಂಥವರ ಪಾಡು ಏನು ? ಅವರಿಗೆ ಕೊಡದೆ ಇನ್ಯಾರಿಗೆ ಕೊಡುತ್ತೀರಿ ?

ಶ್ರೀ ಭೀಮಣ್ಣ ಖಂಡ್ರೆ — ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಕಾಲದಲ್ಲಿ ಎಲ್ಲಾ ೧೬೯ ಸೀಟುಗಳನ್ನು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರಿಗೆ ಕೊಡುತ್ತಿದ್ದಾರೆ ಅದು ಸರಿಯಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಸಾವಿರಾರು ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಮೆಡಿಕಲ್ ಕಾಲೇಜುಗಳನ್ನು ನಡೆಸುತ್ತಿರತಕ್ಕಂಥವರಿಗೆ ಈ ರೀತಿಯ ಕನ್‌ಸಿಷನ್ ಕೊಡಲೇಬೇಕು. ಇದನ್ನು ಇವತ್ತು ಕೊಡುತ್ತಾ ಇದ್ದಾರೆ ಎಂದಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರ ಕಾಲದಲ್ಲಿ ಇದಕ್ಕಿಂತ ಹೆಚ್ಚಿಗೆ ಸೀಟುಗಳನ್ನು ಕೊಟ್ಟಿದ್ದಾರೆ...

ಶ್ರೀ ಡಿ. ದೇವರಾಜ ಅರಸ್.— ನಿಮಗೆ ವಿಷಯ ಗೊತ್ತಿಲ್ಲ. ಸುಮ್ಮನೆ ಏತಕ್ಕೆ ಮಾತನಾಡುತ್ತೀರಿ. ನಾನು ಹೇಳುವಾಗ ನೀವು ಏನು ಮಾಡುತ್ತಿದ್ದಿರಿ ?

ಅಧ್ಯಕ್ಷರು.— ಇದರ ಬಗ್ಗೆ ಚರ್ಚೆ ಬೇಡ. ಈ ವಿಚಾರವನ್ನು ಇಲ್ಲಿಗೆ ನಿಲ್ಲಿಸಿ. ಈಗ ಮಾನ್ಯ ಮಂತ್ರಿಯವರು ಉತ್ತರ ಕೊಡಲಿ.

ಶ್ರೀ ಭೀಮಣ್ಣ ಖಂಡ್ರೆ.— ಸ್ವಾಮಿ, ನಾನು ಮೆಡಿಕಲ್ ಕಾಲೇಜಿನಲ್ಲಿ ಯಾವ ಪ್ರಕಾರ ಸೀಟುಗಳನ್ನು ಕೊಟ್ಟಿದ್ದಾರೆ ಎಂಬ ಬಗ್ಗೆ ಮಾತನಾಡುತ್ತಾ ಅದು ಮೊದಲಿಗಿಂತಲೂ ಕಡಿಮೆ ಇದೆ, ಹೆಚ್ಚು ಇಲ್ಲ ಎಂದು ಹೇಳಿದ್ದೇನೆ. ಅದಕ್ಕೆ ಅವರು ಏನು ಹೇಳಿದರು ಎಂದರೆ...

ಅಧ್ಯಕ್ಷರು.— ಈ ವಿಚಾರದಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಿಸಿದ ಬೇಡಿಕೆ ಚರ್ಚೆಗೆ ಬಂದಾಗ ನೀವು ಅದನ್ನು ಪ್ರಸ್ತಾಪ ಮಾಡಿ.

ಶ್ರೀ ಭೀಮಣ್ಣ. ಖಂಡ್ರೆ.— ಸ್ವಾಮಿ ನಾನು ವಿಷಯ ಬಿಟ್ಟು ಮಾತನಾಡುವುದಿಲ್ಲ. ಕೆಲವು ಕ್ಲಾರಿಫಿಕೇಷನ್ಸ್ ಕೇಳುತ್ತೇನೆ ಅಷ್ಟೆ. ಇವತ್ತು ಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿರತಕ್ಕಂಥ ರೈತರ ಮಕ್ಕಳಿಗೆ ಸರಿಯಾಗಿ ಪರ್ಸೆಂಟೇಜ್ ಆಫ್ ಮಾರ್ಕ್ಸ್ ಬರುವುದಿಲ್ಲ, ಅವರು ಮೆರಿಟ್‌ನಲ್ಲಿ ಬರುವುದಿಲ್ಲ. ಇದರಿಂದಾಗಿ ಅವರಿಗೆ ಸೀಟು ಸಿಕ್ಕುವುದಿಲ್ಲ. ಒಂದು ವೇಳೆ ಯಾರಾದರೂ ಮೆರಿಟ್‌ಮಾರ್ಕ್ಸ್ ತೆಗೆದು ಕೊಂಡಿದ್ದರೆ ಅಂತಹವರು ೫೦,೦೦೦ ರೂಪಾಯಿಗಳ ಕ್ಯಾಪಿಟೇಷನ್ ಫೀ ಕೊಡಬೇಕೆಂದು ಮಾಡಿದ್ದಾರೆ. ಅದನ್ನು ಅವರು ಹೇಳಬೇಕಾದರೆ, ಮಾನ್ಯ ವಿರೋಧ ಪಕ್ಷದವರು ಶಾಂತಿಯಿಂದ ಕೇಳಬೇಕು. ನಾವು ಮಾತನಾಡುವಾಗ ಅವರು ಶಾಂತಿಯಿಂದ ಇರುವುದಕ್ಕೆ ಇಲ್ಲಿ ಅವಕಾಶ ಇರಬೇಡವೇ...

MR. SPEAKER.— Please don't talk irrelevent things.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ೧೩ನೇ ತಾರೀಖು ಇಂಟರ್‌ವ್ಯೂ ಪ್ರಾರಂಭವಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತಾ ಇದ್ದೇನೆ, ಈ ೨೦ ಡಾಲರ್ಸ್ ವಿಚಾರ ಏನಿದೆ ಇದರಲ್ಲಿ ಕರ್ನಾಟಕದ ಮಕ್ಕಳು ಡಾಲರ್ಸ್‌ನಲ್ಲಿ ಹಣ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಇದರ ಬಗ್ಗೆ ಕೂಡಲೇ ಆಲೋಚನೆ ಮಾಡಬೇಕು. ಇಂಟರ್‌ವ್ಯೂ ಆದಮೇಲೆ, ಅಡ್ಮಿಷನ್ ಆದಮೇಲೆ, ಮುಂದಿನ ವರ್ಷದ ವಿಚಾರ ಬಂತು ಅಂದರೆ ಸರಿಹೋಗುವುದಿಲ್ಲ. ಇಂಟರ್‌ವ್ಯೂ ಪ್ರಾರಂಭವಾಗುತ್ತಿದೆ ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರೂ ಮತ್ತು ಮಾನ್ಯ ದೇವೇಗೌಡರೂ ಹೇಳಿದ್ದಾರೆ. ಡಾಲರ್‌ನಲ್ಲಿ ಕೊಡುವ ರೀತಿ ಮಾಡಿದರೆ ಕರ್ನಾಟಕದ ಮಕ್ಕಳಿಗೆ ಸಿಕ್ಕುವುದಿಲ್ಲ. ಕರ್ನಾಟಕದ ಮಕ್ಕಳು ರೂಪಾಯಿಯಲ್ಲಿ ಕೊಡುತ್ತಾರೆ. ೩೮ ಸಾವಿರ ಇದ್ದದ್ದು ೫೦ ಸಾವಿರ ಆಯಿತು. ಈಗ ೫೦ ಸಾವಿರದಿಂದ ೭೦ ಸಾವಿರ ಮಾಡುತ್ತೀರೋ ಏನೊ. ಅಂತು ಕರ್ನಾಟಕ ಮಕ್ಕಳಿಗೆ ಅವಕಾಶ ಸಿಕ್ಕುವಂತೆ ಇವತ್ತು ಅಥವಾ ನಾಳೆಯಲ್ಲಿ ತೀರ್ಮಾನಮಾಡಬೇಕು.

ಶ್ರೀ ಆರ್. ಗುಂಡೂರಾವ್.— ಮಾನ್ಯ ವಿರೋಧಪಕ್ಷದ ನಾಯಕರು, ಮತ್ತು ತಾವು ಮಾತನಾಡಿದ್ದನ್ನು ನಾನು ಕೇಳಿದೆ. ನಾವು ಹಿಂದೆ ಯಾರೂ ಮಾಡದೇ ಇರುವ ರೀತಿಯಲ್ಲಿ ಹೊಸ ರೂಪದಲ್ಲಿ ಜಾಸ್ತಿ ಮಾಡುತ್ತಿದ್ದಾರೆ ಎನ್ನುವ ಅರ್ಥದಲ್ಲಿ ಅವರು ಮಾತನಾಡಿದ್ದಾರೆ. ಹಿಂದೆ ಮಾಡಿದ್ದಾರೆ ಈಗ ಪರ್ಸೆಂಟೇಜ್ ಕಡಿಮೆ ಇದೆ. ಸರ್ಕಾರದ ಉದ್ದೇಶ ಅದಲ್ಲ. ಕಳೆದ ಸಾರಿ ೪೫ ಪರ್ಸೆಂಟ್ ಇಟ್ಟಿದ್ದರು. We have reduced the Capitation fee from 45% to 25% this time. The Health Minister will give the details. We are prepared to place before this House a comparative statement giving details as to how many seats were allotted last year, how many were allotted year before last year, what was the rate fixed and so on. The way in which the Leader of the Opposition started his argument showed that ours is a conservative statement compared to the previous Goverment's statement I may say that ours is a more progressive one than the previous Governments.

SRI D. DEVARA URS.— I shall be happy if you can prove it.

SRI R. GUNDU RAO.— I will prove it. What you have done last year and what we are going to do this year will be on record.

ಶ್ರೀ ಹೆಚ್. ಡಿ. ದೇವೇಗೌಡ.— ತಾವು ಹಿಂದೆ ಇದ್ದಂಥ ಜನರಲ್ ಪರ್‌ಪ್ಯೂನಲ್ಲಿ ತಂದಂಥ ಸೀಟ್ಸ್‌ನ್ನು ಹೆಚ್ಚು ಮಾಡಿದ್ದೀರಿ, ರಾಮಯ್ಯ ಕಾಲೇಜಿನವರಿಗೆ ೯೦ ಸೀಟುಗಳನ್ನು ಇಷ್ಟಬಂದವರಿಗೆ ಕೊಡುವುದನ್ನು ತಪ್ಪಿಸಿದ್ದೀರಿ. We are going to welcome the measure taken by the Government so far as that aspect of the matter is concerned. ಆದರೆ, ೫೦,೦೦೦ ಕ್ಯಾಪಿಟೇಷನ್ ಫೀಸ್‌ನನ್ನು ಹಳ್ಳಿಯವರ ಮಕ್ಕಳಿಗೆ ಸಿಕ್ಕುವುದನ್ನು ತಪ್ಪಿಸುವುದರಲ್ಲಿ ಕೈವಾಡ ಇದೆ. ನಿಮ್ಮ ಛೇಂಬರಿನಲ್ಲಿ ಸಭೆ ಕರೆಯಿರಿ. ನಾನು ಅದನ್ನು ಪ್ರೂವ್ ಮಾಡುತ್ತೇನೆ. ಬ್ಯಾಕ್‌ವರ್ಡ್ ಕ್ಲಾಸ್‌ಗೆ ಪರ್ಸೆಂಟೇಜ್ ಹೆಚ್ಚು ಮಾಡಿದ್ದೀರಿ. I have no objection. But you cannot deny this benefit to the rural boys.

SRI. R. GUNDU RAO.— Today evening I will call a meeting and discuss and take a decision tomorrow.

SRI D. DEVARAJ URS.— Before you call the meeting, I would like to get the information.

SRI R. GUNDU RAO.— The meeting will be held after getting the information.

MR. SPEAKER.— Mr. Lakshmisagar, the matter raised by you under Rule 312 will be taken up within one or two days.

ANNOUNCEMENT

MR. SPEAKER.— I have received a message from the Chairman, Legislative Council to the effect that the Legislative Council has given its concurrence to the appointment of a Joint Select Committee and that the following members of the Legislative Coucil shall also be the members of the Joint Select Committee.

Sriyuths.— M. Raghupathy
Abdul Nazir Sab
T. N. Narasimha Murthy
D. Rajgopal and
S. Mallikarjunaiah

Further the Legislative Council has adopted the following amendment to the motion adopted in this House on 7th May, 1980.

"For the figures and words 30th June 1980 appearing in the last line, the figures and words "30th August 1980" be substituted."

AMENDMENT TO THE MOTION FOR APPOINTMENT OF JOINT SELECT COMMITTEE ON THE KARNATAKA ESSENTIAL SERVICES MAINTENANCE BILL, 1979.

SRI R. GUNDU RAO (Chief Minister).— Sir, I beg to move that the following amendment made by the legislative Council to the Karnataka Essential Services Maintenance Bill, 1979 be agreed to.—

"For the figures and words "30th June 1980" appearing in the last line, the figures and words "30th August 1980" be substituted."